# <u>ಪ್ರಾಥಮಿಕ ಡಿಕ್ರಿ (Preliminary Decree)</u>

**<u>ನಂಜನಗೂಡಿನ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯದಲ್ಲಿ</u>**

**<u>ಅಸಲು ದಾವಾ ಸಂಖ್ಯೆಃ 394-2014</u>**

**<u>ವಾದಿಃ</u>**

1. ಶಿವನಂಜಮ್ಮ ಕೋಂ ಮಲ್ಲಿಕಾರ್ಜುನಪ್ಪ ವಯಸ್ಸು 52 ವರ್ಷ
2. ಜವನಮ್ಮ ಕೋಂ ಪುಟ್ಟಣ್ಣ, ವಯಸ್ಸು 60 ವರ್ಷ,

ಇಬ್ಬರೂ ಹದಿನಾರು ಗ್ರಾಮ, ಚಿಕ್ಕಯ್ಯನಛತ್ರ ಹೋಬಳಿ, ನಂಜನಗೂಡು ತಾಲ್ಲೋಕು.

ವಿರುದ್ಧ

**<u>ಪ್ರತಿವಾದಿಗಳು ಃ</u>**

1. ಮಾದಪ್ಪ ಬಿನ್ ಶಿವನಯ್ಯ ವಯಸ್ಸು 58 ವರ್ಷ
2. ರತ್ನಮ್ಮ ಕೋಂ ಶಿವಲಿಂಗಪ್ಪ, ವಯಸ್ಸು 53 ವರ್ಷ
3. ಸುರೇಶ ಬಿನ್ ಲೇಟ್ ಶಿವಲಿಂಗಪ್ಪ ವಯಸ್ಸು 33 ವರ್ಷ
4. ಕುಮಾರ ಬಿನ್ ಲೇಟ್ ಶಿವಲಿಂಗಪ್ಪ ವಯಸ್ಸು 36 ವರ್ಷ
5. ಮೀನಾಕ್ಷಿ ಕೋಂ ಶೇಖರ ವಯಸ್ಸು 30 ವರ್ಷ
6. ಶಿವಪ್ಪ ಬಿನ್ ಲೇಟ್ ಶಿವನಯ್ಯ ವಯಸ್ಸು 50 ವರ್ಷ

5ನೇ ಪ್ರತಿವಾದಿ ಹೊರತು ಪಡಿಸಿ ಉಳಿದ ಪ್ರತಿವಾದಿಗಳು ಮಾದಯ್ಯನಹುಂಡಿ ಗ್ರಾಮ, ಚಿಕ್ಕಯ್ಯನಛತ್ರ ಹೋಬಳಿ, ನಂಜನಗೂಡು ತಾಲ್ಲೂಕು ವಾಸಿಗಳು,

5ನೇ ಪ್ರತಿವಾದಿ ವಾಸಃ ಸುತ್ತೂರು ಗ್ರಾಮ, ಬಿಳಿಗೆರೆ ಹೋಬಳಿ, ನಂಜನಗೂಡು ತಾಲ್ಲೂಕು.

**ದಾವೆಯನ್ನು ಹೂಡಿದ ದಿನಾಂಕಃ 03-07-2014.**

**ದಾವಾದಲ್ಲಿನ ಕೋರಿಕೆಃ**

ದಾವಾ ಷೆಡ್ಯೂಲ್ ಸ್ವತ್ತುಗಳಲ್ಲಿ ವಾದಿಗಳ 5ನೇ 1 ಭಾಗ ಹಕ್ಕುದಾರರೆಂದು ಘೋಷಿಸಿ ವಿಭಜಿಸಿ ಪ್ರತ್ಯೇಕ ಸ್ವಾಧೀನಪಡಿಸಿ ಕೊಡಬೇಕೆಂದು ಹಾಗೂ ಸಂದರ್ಭಾನುಸಾರ 1 ರಿಂದ 5ನೇ ಪ್ರತಿವಾದಿಗಳು ದಾವಾ ಸ್ವತ್ತಿಗೆ ಅಡ್ಡಿಪಡಿಸುವಂತೆ ಶಾಶ್ವತ ನಿರ್ಬಂಧಕಾಜ್ಞೆ ಪ್ರತಿವಾದಿಗಳ ವಿರುದ್ಧ ದಯಪಾಲಿಸಬೇಕೆಂದು ಹಾಗೂ ಇತರೆ ನ್ಯಾಯೋಜಿತ ಪರಿಹಾರಗಳನ್ನು ವಾದಿಗಳು ದಯಪಾಲಿಸಲು ಹಾಗೂ ವಾದಿಗಳಿಗೆ ಬರುವಂತಹ ದಾವಾ ಸ್ವತ್ತಿನಲ್ಲಿ ಮಧ್ಯಂತರ ಲಾಭವನ್ನು ಪ್ರತಿವಾದಿಗಳಿಂದ ಕೊಡಿಸಲು ಸಹ ಮತ್ತು ಪ್ರತಿವಾದಿಗಳು ವಾದಿಗಳನ್ನು ಬಿಟ್ಟು ದಾವಾ ಷೆಡ್ಯೂಲ್ ಸ್ವತ್ತುಗಳನ್ನು ತಮ್ಮ ತಮ್ಮ ಹೆಸರಿಗೆ ವಾದಿಗಳ ಗಮನಕ್ಕೆ ತಾರದೆ ಮಾಡಿಕೊಂಡಿರುವ ಖಾತಾ ಬದಲಾವಣೆ ವಾದಿಗಳ ಭಾಗಾಂಶದ ಹಕ್ಕಿಗೆ ಬಾದಕವಾಗುವುದಿಲ್ಲವೆಂದು ಘೋಷಿಸಬೇಕಾಗಿ ಘನ ನ್ಯಾಯಾಲಯವನ್ನು ವಾದಿಗಳು ಪ್ರಾರ್ಥಿಸುತ್ತಾರೆ.

ಶ್ರೀಮತಿ ಶರ್ಮಿಳ. ಎಸ್. ಬಿ.ಕಾಂ.ಎಲ್.ಎಲ್.ಬಿ., ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾದೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ನಂಜನಗೂಡು ಇವರ ಘನ ಸಮ್ಮುಖದಲ್ಲಿ ಹಾಗೂ ವಾದಿಗಳ ಪರ ವಕೀಲರಾದ ಶ್ರೀ ಪಿ. ಮಹೇಶ್ ಹಾಗೂ 1 ರಿಂದ 4 ಹಾಗೂ 6ನೇ ಪ್ರತಿವಾದಿಗಳ ಪರ ಶ್ರೀ ಸಿ.ಎಂ.ಶಂಕರಪ್ಪ ವಕೀಲರು ಮತ್ತು 6ನೇ ಪ್ರತಿವಾದಿ ಏಕಪಕ್ಷೀಯವಾಗಿರುತ್ತಾರೆ.

ವಾದ ವಿವಾದದ ನಂತರ ತೀರ್ಪನ್ನು ಉದ್ಘೋಷಿಸಿ, ವಾದಿಯು ಪ್ರತಿವಾದಿಗಳ ವಿರುದ್ಧ ಹೂಡಿರುವ ಪ್ರಸ್ತುತ ದಾವೆಯನ್ನು ಖರ್ಚು ಸಹಿತ ಡಿಕ್ರಿ ಮಾಡಲಾಗಿದೆ ಎಂಬುದಾಗಿ ಈ ಮೂಲಕ ಆದೇಶ ನೀಡಲಾಗಿದೆ.

ತತ್ಪರಿಣಾಮವಾಗಿ, ವಾದಿಗಳು ದಾವಾ ಅಸ್ತಿಗಳ ಮೇಲೆ ಮತ್ತು ಎಲ್ಲೆಗಳನ್ನು ಗುರ್ತಿಸಿ 1/5 ರಂತೆ ತಮ್ಮ ಪಾಲು ಮತ್ತು ಹಿಸ್ಸೆಗೆ ಅರ್ಹರಿರುತ್ತಾರೆಂದು ಅದೇಶಿಸಲಾಗಿದೆ. ಪ್ರತ್ಯೇಕ ವಿಚಾರಣೆ ನಡೆಸಿ ಮಧ್ಯಕಾಲಿನ ಲಾಭಾಂಶವನ್ನು ಪಡೆಯಲು ಅರ್ಹರಿರುತ್ತಾರೆ.

ಮೇಲಿನ ಅದೇಶದಂತೆ ಪ್ರಾಥಮಿಕ ಡಿಕ್ರಿಯನ್ನು ಬರೆಯಲಾಗಿದೆ.

ದಿನಾಂಕ 08 ನೇ ದಿವಸ ಜುನ್ ಮಾಹೆ 2016 ರಂದು ನ್ಯಾಯಾಲಯದ ಮೊಹರಿನೊಡನೆ ನನ್ನ ಸ್ವಹಸ್ತ ನೀಡಲಾಗಿದೆ.

ಒಂದನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ನಂಜನಗೂಡು.

## <u>ಈ ದಾವೆಯಲ್ಲಿ ಉಭಯ ಪಕ್ಷಕಾರರರಿಗೆ ಉಂಟಾಗಿರುವ ಖರ್ಚು-ವೇಚ್ಚಗಳ ಪಟ್ಟಿ</u>

| ಕ್ರಮ ಸಂಖೆ | ಶುಲ್ಕದ ವಿವರಣೆಗಳು | ವಾದಿಗಳಿಗೆ | ಪ್ರತಿವಾದಿ (ಗೈರು ಹಾಜರು) |
|---|---|---|---|
| 1 | ನ್ಯಾಯಾಲಯದ ಶುಲ್ಕ | ರೂ. 200-00 | - |
| 2 | ನ್ಯಾಯವಾದ ಪತ್ರದ ಮೇಲಿನ ಶುಲ್ಕ | - | - |
| 3 | ಮಧ್ಯಂತರ ಅರ್ಜಿಯ ಮೇಲಿನ ಶುಲ್ಕ | - | – |
| 4 | ನ್ಯಾಯವಾದಿಗಳ ಶುಲ್ಕ (ಶುಲ್ಕಪತ್ರ ಹಾಜರು ಪಡಿಸಿರುತ್ತಾರೆ) | - | - |
| 5 | ಕಮಿಷನರ್ ಶುಲ್ಕ | - | - |
| 6 | ಮಧ್ಯಂತರ ಅರ್ಜಿಯ ಮೇಲಿನ ಕಾಸ್ಟ್ | - | - |
| 7 | ಕಾಸ್ಟ್ ಫಾರ್ ಅಡ್ಜರ್ನ್‌ಮೆಂಟ್ | | - |
| 8 | ಪ್ರೊಸೆಸ್ ಜಾರಿಗೆ | ರೂ. 32-00 | - |
| 9 | <u>ಒಟ್ಟು ಮೊತ್ತ</u> | ರೂ. 232-00 | - |

## <u>ಷೆಡ್ಯೂಲ್</u>

1) ನಂಜನಗೂಡು ತಾಲ್ಲೂಕು, ಚಿಕ್ಕಯ್ಯನಛತ್ರ ಹೋಬಳಿ, ಮೂಡಹಳ್ಳಿ ಗ್ರಾಮಕ್ಕೆ ಸೇರಿದ ಸರ್ವೆ ನಂ. 65/4 ರಲ್ಲಿ 1 ಎಕರೆ 0.35 ಗುಂಟೆ ಖುಷ್ಕಿ ಜಮೀನಿಗೆ ಚಕ್ಕುಬಂದಿಃ
ಪೂರ್ವಕ್ಕೆ ಃ ಜವರಪ್ಪ ಬಿನ್ ಲೇಟ್ ಪುಟ್ಟಪ್ಪ
ಪಶ್ಚಿಮಕ್ಕೆ ಃ ಮಾದಪ್ಪ ಬಿನ್ ಲೇಟ್ ಲಿಂಗಪ್ಪರವರ ಜಮೀನು
ಉತ್ತರಕ್ಕೆ ಃ ವರುಣ ನಾಲಾ
ದಕ್ಷಿಣಕ್ಕೆ ಃ ಭಾಗ್ಯ ಕೋಂ ಪುಟ್ಟರಾಜುವರ ಜಮೀನು

2) ನಂಜನಗೂಡು ತಾಲ್ಲೂಕು, ಚಿಕ್ಕಯ್ಯನಛತ್ರ ಹೋಬಳಿ, ಮೂಡಹಳ್ಳಿ ಗ್ರಾಮಕ್ಕೆ ಸೇರಿದ ಸರ್ವೆ ನಂಃ 83/2 ರಲ್ಲಿ 0.09 ಗುಂಟೆ ಹಾಗೂ 83/3ರಲ್ಲಿ 0.23 ಗುಂಟೆ ಖುಷ್ಕಿ ಜಮೀನಿಗಳಿಗೆ ಚಕ್ಕುಬಂದಿಃ
ಪೂರ್ವಕ್ಕೆ ಃ ಸರ್ಕಾರಿ ಗೋಮಾಳ

ಪಶ್ಚಿಮಕ್ಕೆ ಃ ನಿಮುಗರಾಜು ಬಿನ್ ಪಿ.ಲಿಂಗಣ್ಣರವರ ಜಮೀನು
ಉತ್ತರಕ್ಕೆ ಃ ಪುಟ್ಟಸ್ವಾಮಿ ಬಿನ್ ಚನ್ನಮಲ್ಲಪ್ಪವರ ಜಮೀನು
ದಕ್ಷಿಣಕ್ಕೆ ಃ ಸರ್ಕಾರಿ ಗೋಮಾಳ

3) ನಂಜನಗೂಡು ತಾಲ್ಲೂಕು, ಚಿಕ್ಕಯ್ಯನಛತ್ರ ಹೋಬಳಿ, ಮೂಡಹಳ್ಳಿ ಗ್ರಾಮಕ್ಕೆ ಸೇರಿದ ಸರ್ವೆ ನಂಃ 100/3 ರಲ್ಲಿ 0.30 ಗುಂಟೆ ಖುಷ್ಕಿ ಜಮೀನಿಗೆ ಚಕ್ಕುಬಂದಿಃ
ಪೂರ್ವಕ್ಕೆ ಃ ಮಹದೇವಪ್ಪ ಬಿನ್ ಮರಿದೊಡ್ಡಪ್ಪರವರ ಜಮೀನು
ಪಶ್ಚಿಮಕ್ಕೆ ಃ ಮಾದಪ್ಪ ಬಿನ್ ಹಿಂದ್ಲಟ್ಟಿ ಮಾದಪ್ಪವರ ಜಮೀನು
ಉತ್ತರಕ್ಕೆ ಃ ರಸ್ತೆ
ದಕ್ಷಿಣಕ್ಕೆ ಃ ಪ್ರಕಾಶ ಬಿನ್ ಮಾದಪ್ಪವರ ಜಮೀನು

4) ನಂಜನಗೂಡು ತಾಲ್ಲೂಕು, ಚಿಕ್ಕಯ್ಯನಛತ್ರ ಹೋಬಳಿ, ಮೂಡಹಳ್ಳಿ ಗ್ರಾಮಕ್ಕೆ ಸೇರಿದ ಸರ್ವೆ ನಂ. 164/3 ರಲ್ಲಿ 0.20 ಗುಂಟೆ ಖುಷ್ಕಿ ಜಮೀನಿಗೆ ಚಕ್ಕುಬಂದಿಃ
ಪೂರ್ವಕ್ಕೆ ಃ ಲಿಂಗಪ್ಪ ಬಿನ್ ಹೊಟ್ಟೆಮಾದಪ್ಪವರ ಜಮೀನು
ಪಶ್ಚಿಮಕ್ಕೆ ಃ ಪಕಾಶ ಬಿನ್ ಲೇಟ್ ಮಹದೇವಪ್ಪವರ ಜಮೀನು
ಉತ್ತರಕ್ಕೆ ಃ ಗುರುಮಲ್ಲಪ್ಪ ಬಿನ್ ಹಿಂದ್ಲಟ್ಟಿ ಮಾದಪ್ಪವರ ಜಮೀನು
ದಕ್ಷಿಣಕ್ಕೆ ಃ ರಸ್ತೆ

5) ನಂಜನಗೂಡು ತಾಲ್ಲೂಕು, ಚಿಕ್ಕಯ್ಯನಛತ್ರ ಹೋಬಳಿ, ಮೂಡಹಳ್ಳಿ ಗ್ರಾಮಕ್ಕೆ ಸೇರಿದ ಸರ್ವೆ ನಂ. 196/1 ರಲ್ಲಿ 1 ಎಕರೆ 0.01 ಗುಂಟೆ ಹಾಗೂ 196/2 ರಲ್ಲಿ 0.38 ಗುಂಟೆ ಖುಷ್ಕಿ ಜಮೀನುಗಳಿಗೆ ಚಕ್ಕುಬಂದಿಃ
ಪೂರ್ವಕ್ಕೆ ಃ ಮಾದಪ್ಪ ಬಿನ್ ಸಿದ್ದಮಲ್ಲಪ್ಪವರ ಜಮೀನು
ಪಶ್ಚಿಮಕ್ಕೆ ಃ ಕೆಂಪಮ್ಮ ಮತ್ತು ಸರ್ವಮಂಗಳರವರರ ಜಮೀನು
ಉತ್ತರಕ್ಕೆ ಃ ಸಣ್ಣ ಕಾಲುವೆ
ದಕ್ಷಿಣಕ್ಕೆ ಃ ಗುರುಲಿಂಗಪ್ಪ ಬಿನ್ ಸಿದ್ದಪ್ಪವರ ಜಮೀನು

ಒಂದನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ನಂಜನಗೂಡು.

**ನಂಜನಗೂಡಿನ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯದಲ್ಲಿ**

**ಅಸಲು ದಾವಾ ಸಂಖ್ಯೆ: 464-2009**

| | |
|---|---|
| **ವಾದಿಃ** | **ಗೌರಮ್ಮ ಬಿನ್ ಲೇಟ್ ಚಿಕ್ಕಮಾದಪ್ಪ ವಯಸ್ಸು 70 ವರ್ಷಗಳು, ಚಿನ್ನಂಬಳ್ಳಿ ಗ್ರಾಮ, ನಂಜನಗೂಡು ತಾಲ್ಲೂಕು.** |
| **ವಿರುದ್ಧ** | |
| **ಪ್ರತಿವಾದಿಗಳು ಃ** | **1. ಕೆಂಪಮ್ಮ ಮೃತರಾಗಿದ್ದು ಅವರ ವಾರಸುದಾರರು,<br>ಎ. ಮಹಾದೇವಮ್ಮ ಬಿನ್ ಕೆಂಪಮ್ಮ 40 ವರ್ಷಗಳು,<br>ಬಿ. ಬಸವಣ್ಣ ಬಿನ್ ಕೆಂಪಮ್ಮ 35 ವರ್ಷಗಳು , ಇಬ್ಬರೂ ವಾಸಃ ಮಲ್ಲಿಪುರ ಗ್ರಾಮ , ಬಿಳಿಗೆರೆ ಹೋಬಳಿ , ನಂಜನಗೂಡು ತಾಃ<br>ಸಿ. ಪಾಪಣ್ಣ , ಬಿನ್ ಕೆಂಪಮ್ಮ , 30 ವರ್ಷಗಳು, ಚಿಕ್ಕಕವಲಂದೆ ಗ್ರಾಮ, ನಂಜನಗೂಡು ತಾಃ<br>2. ನಂಜುಂಡಪ್ಪ , ಬಿನ್ ನಿಂಗಪ್ಪ, 75 ವರ್ಷಗಳು,<br>3. ಶಾಂತಪ್ಪ ಬಿನ್ ಕೆಂಪಪ್ಪ , 65 ವರ್ಷಗಳು , 2 ಮತ್ತು 3ನೇ ಪ್ರತಿವಾದಿಗಳು ಚಿನ್ನಂಗಳ್ಳಿ ಗ್ರಾಮ, ಬಿಳಿಗೆರೆ ಹೋಬಳಿ , ನಂಜನಗೂಡು ತಾಲ್ಲೂಕು ವಾಸಿಗಳು.** |

**ದಾವೆಯನ್ನು ಹೂಡಿದ ದಿನಾಂಕಃ 02–12-2009.**

**ದಾವಾದಲ್ಲಿನ ಕೋರಿಕೆಃ**

**ದಾವೆಯನ್ನು ವಾದಿಯು ಪ್ರತಿವಾದಿಗಳ ವಿರುದ್ದ ದಾಖಲು ಮಾಡಿದ್ದು ದಾವೆಯ ತೀರ್ಪು ಮತ್ತು ಡಿಕ್ರಿಯನ್ನು ವಾದಿಗಳ ಪರ ದಯ ಪಾಲಿಸುವಂತೆ ಹಾಗೂ ದಿಃ 6-3-1969 ರಂದು ಆಗಿರುವ ನೊಂದಣಿ ಮರಣ ಶಾಸನವು ವಾದಿಯನ್ನು ಬದ್ಧ ಪಡಿಸದೆ**

ಇರುವುದರಿಂದ ಶೂನ್ಯ ಹಾಗೂ ಅಸಿಂದು ಎಂದು ತೀರ್ಮಾನಿಸಿ ಮತ್ತು ವಾದಿಯು, ದಾವ ಷೆಡ್ಯೂಲ್ ಸ್ವತ್ತಿನ ಮಾಲೀಕರು ಎಂದು ಘೋಷಣೆ ಮಾಡಬೇಕೆಂತಲೂ ಪ್ರತಿವಾದಿಯಾರಾಗಲೀ ಅಥವಾ ಅವರ ಪರ ಪ್ರತಿನಿಧಿಸುವ ಇತರೆ ಯಾರೆ ಅಗಲೀ ಅಡ್ಡಿಪಡಿಸದಂತೆ ಶಾಶ್ವತ ನಿರ್ಭಂದಕಾಜ್ಞೆ ಅದೇಶವನ್ನು ಮತ್ತು ದಾವಾ ಸಂಧರ್ಭನುಸಾರ ದೊರೆಯಬಹುದಾದ ಇತರೆ ಪರಿಹಾರಗಳನ್ನು ದಾವಾದ ಖರ್ಚಿನೊಂದಿಗೆ ದಯಪಾಲಿಸಬೇಕೆಂತಲೂ ಕೋರಿರುತ್ತಾರೆ.

ಈ ದಾವೆಯನ್ನು ಅಂತಿಮ ತೀರ್ಮಾನಕ್ಕೆ ಶ್ರೀಮತಿ ಶರ್ಮಿಳಾ. ಬಿ.ಕಾಂ. ಎಲ್.ಎಲ್.ಬಿ, ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾದೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ನಂಜನಗೂಡು ಇವರ ಘನ ಸಮ್ಮುಖದಲ್ಲಿ ಹಾಗೂ ವಾದಿಗಳ ಪರ ವಕೀಲರಾದ ಶ್ರೀ ಎಂ.ಡಿ.ಚಂದ್ರಶೇಖರ್ ಹಾಗೂ ಶ್ರೀ ಸಿ.ಎಲ್.ಬಸವರಾಜು 1ನೇ ಪ್ರತಿವಾದಿಗಳ ವಾರಸುದಾರರ ಪರ ವಕೀಲರು ಹಾಜರಾಗಿದ್ದು ಹಾಗೂ 2 ಮತ್ತು 3 ನೇ ಪ್ರತಿವಾದಿಗಳು ಗೈರು ಹಾಜರಾಗಿರುತ್ತಾರೆ.

ಎರಡು ಕಡೆಯ ವಾದ ವಿವಾದದ ನಂತರ ತೀರ್ಪನ್ನು ಉದ್ಘೋಷಿಸಿ, ವಾದಿಯು ಪ್ರತಿವಾದಿಗಳ ವಿರುದ್ಧ ಸಲ್ಲಿಸಿರುವ ಪ್ರಸ್ತುತ ದಾವೆಯನ್ನು ಖರ್ಚು ಸಹಿತ ವಜಾಗೊಳಿಸಲಾಗಿದೆ.

ದಿನಾಂಕ 29 ನೇ ದಿವಸ ಏಪ್ರಿಲ್ ಮಾಹೆ 2016 ರಂದು ನ್ಯಾಯಾಲಯದ ಮೊಹರಿನೊಡನೆ ನನ್ನ ಸ್ವಹಸ್ತ ನೀಡಲಾಗಿದೆ.

1ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ
ನಂಜನಗೂಡು

**ಈ ದಾವೆಯಲ್ಲಿ ಉಭಯ ಪಕ್ಷಕಾರರರಿಗೆ ಉಂಟಾಗಿರುವ ಖರ್ಚು-ವೇಚ್ಚಗಳ ಪಟ್ಟಿ**

| ಕ್ರಮ ಸಂಖೆ | ಶುಲ್ಕದ ವಿವರಣೆಗಳು | ವಾದಿಗಳಿಗೆ | ಪ್ರತಿವಾದಿಗಳಿಗೆ |
|---|---|---|---|
| 1 | ನ್ಯಾಯಾಲಯದ ಶುಲ್ಕ | ರೂ. 152-00 | - |
| 2 | ನ್ಯಾಯವಾದ ಪತ್ರದ ಮೇಲಿನ ಶುಲ್ಕ | - | - |
| 3 | ಮಧ್ಯಂತರ ಅರ್ಜಿಯ ಮೇಲಿನ ಶುಲ್ಕ | - | – |
| 4 | ನ್ಯಾಯವಾದಿಗಳ ಶುಲ್ಕ (ಶುಲ್ಕಪತ್ರ ಹಾಜರು ಪಡಿಸಿರುತ್ತಾರೆ) | ರೂ. 500-00 | - |
| 5 | ಕಮಿಷನರ್ ಶುಲ್ಕ | - | - |
| 6 | ಮಧ್ಯಂತರ ಅರ್ಜಿಯ ಮೇಲಿನ ಕಾಸ್ಟ್ | - | - |
| 7 | ಕಾಸ್ಟ್ ಫಾರ್ ಅಡ್ಜರ್ನ್‌ಮೆಂಟ್ | - | - |
| 8 | ಪ್ರೊಸೆಸ್ ಜಾರಿಗೆ | ರೂ. 40-00 | - |
| 9 | ಒಟ್ಟು ಮೊತ್ತ | ರೂ. 692-00 | - |

1ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ
ನಂಜನಗೂಡು

## : SCHEDULE :

**Landed property bearing Sy.No. 12 measuring 4.31 acres situated at Chinnamballi Village, biligere hobli, Nanjangud taluk, having bounded on:-**

**East by : Voni,**
**West by : Tagaduru Elle,**
**North by : Land of Madamma,**
**South by : Land of Madamma,**

**1ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ**
**ನಂಜನಗೂಡು**